**O.S No.4832/2007**
**DW-2**

**ದಿನಾಂಕಃ *01.03.2025* ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ  ಟಿ ಆರ್  ವಕೀಲರಿಂದಃ**

ಮನೆ ನಂಬರ *659, 9* ನೆ ಅಡ್ಡರಸ್ತೆ, ಉಟ್ಟೀಗೇರೆ, ವಿವರ್ಸ ಕಾಲೋನಿ, ಬನ್ನೇರಘಟ್ಟ ರೋಡ ವಿಳಾಸದಲ್ಲಿ ವಾಸ ಮಾಡುತ್ತಿದ್ದೇನೆ, ನಾನು ಸುಮಾರು *40* ವರ್ಷಗಳಿಂದ ಅಂದರೆ ಸುಮಾರು *1985* ನೆ ಇಸವಿಯಿಂದ ಮೇಲೆ ಹೇಳಿದ ವಿಳಾಸದಲ್ಲಿ ವಾಸ ಮಾಡುತ್ತಿದ್ದೇನೆ.  ಆ ಮನೆಯಲ್ಲಿ *40* ವರ್ಷಗಳಿಂದ ಯಾರು ಯಾರು ವಾಸ ಮಾಡುತ್ತಿದ್ದೀರಿ ಎಂದರೆ ನಾನು ಮತ್ತು ನನ್ನ ತಂದೆ ತಾಯಿ, ನನ್ನ ಹೆಂಡತಿ ಮಕ್ಕಳು ವಾಸಮಾಡುತ್ತಿದ್ದೇವೆ. ನಿಮ್ಮ ತಂದೆ ಹೆಸರು ಏನು ಎಂದರೆ ನನ್ನ ತಂದೆ ಹೆಸರು ಸಹದೇವನ್.  ಅವರು ದಿಃ *27.05.2023* ರಂದು ಕಾಲವಾಗಿದ್ದರು. ಅವರು ಮನೆಯಲ್ಲೆ ಕಾಲವಾಗಿದ್ದರು. ಅವರು ತೀರಿಕೊಳ್ಳುವವರಗೊ ಆರೋಗ್ಯವಾಗಿ ಓಡಾಡುತ್ತಿದ್ದರು. ನಮ್ಮ ತಂದೆಯವರು ಗುರುಸ್ವಾಮಿಯಾಗಿದ್ದರು ಹಾಗೆಂದರೆ ಅಯ್ಯಪ್ಪ ಸ್ವಾಮಿ ದೇವಸ್ಥಾನ/ ಶಬರಿಮಲೆ ದೇವಸ್ಥಾನ ಕ್ಕೆ ಹೋಗುವ ಭಕ್ತರಿಗೆ ಪೂಜೆ ಮಾಡಿ ಹಿರೂಮೂಡಿ ಕಟ್ಟಿ ಅವರ ಜೊತೆಯಲ್ಲೆ ಶಬರಿಮಲೆಗೆ ಹೋಗಿ ಬಂದು ನಂತರ ಹಿರೂಮೂಡಿ ಯನ್ನು ತೆಗೆಯುವುದು.  ಶಬರಿಮಲೆ ದೇವಸ್ಥಾನ ವರ್ಷದಲ್ಲಿ ನವೆಂಬರ ತಿಂಗಳಲ್ಲಿ ತೆಗೆದು ಜನವರಿ ತಿಂಗಳಲ್ಲಿ ಮುಚ್ಚುತ್ತಾರೆ ಉಳಿಕೆ ತಿಂಗಳುಗಳಲ್ಲಿ *5*

ರಿಂದ *6* ದಿನ ತೆಗೆಯುತ್ತಾರೆ. ವರ್ಷದಲ್ಲಿ ಒಂದರಿಂದ ಎರಡು ಬಾರಿ ನಮ್ಮ ತಂದೆಯವರು ಗುರುಸ್ವಾಮಿಯಾಗಿ ಶಬರಿಮಲೆಗೆ ಹೋಗಿಬರುತ್ತಿದ್ದರು. ನಮ್ಮ ತಂದೆಯವರು ತೀರಿಕೊಳ್ಳುವ *10* ವರ್ಷಗಳ ಪೂರ್ವದಲ್ಲೆ ಶಬರಿಮಲೆಗೆ ಹೋಗುವುದನ್ನು ನಿಲ್ಲಿಸಿದ್ದರು ನಿರ್ದಿಷ್ಟವಾಗಿ ಯಾವ ಇಸವಿಯಿಂದ ನಿಲ್ಲಿಸಿದ್ದರು ಎಂದು ಹೇಳಲು ನನಗೆ ನೆನಪಿಲ್ಲ. ನೀವು ಈ ಹಿಂದೆ ನ್ಯಾಯಾಲಯಕ್ಕೆ ವಿಚಾರಣೆಗೆ ಬಂದಾಗ ನಿಮ್ಮ ತಂದೆಯವರ ಹೆಸರು ಸಹದೇವ ಸ್ವಾಮಿ ಎಂದು ಹೇಳಿದ್ದೀರಿ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರನ್ನು ಸಹದೇವನ್ ಎಂದು ಕರೆಯುತ್ತಾರೆ. ನೀವು ಹಾಜರು ಪಡಿಸಿರುವ ಮರಣ ಪ್ರಮಾಣ ಪತ್ರದಲ್ಲಿ ಸಹದೇವಪ್ಪ ಎಂದು ನಮೂದಾಗಿದೆ ಎಂದರೆ ಸರಿ. ನೀವು ನ್ಯಾಯಾಲಯಕ್ಕೆ ಸಾಕ್ಷಿ ನೀಡುತ್ತಿರುವ ಈ ದಾವೆ ಯಾರು ಯಾರ ವಿರುದ್ಧ ಏನು ಪರಿಹಾರ ಕೋರಿ ಸಲ್ಲಿಸಿದ್ದಾರೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ. ನೀವು ನ್ಯಾಯಾಲಯಕ್ಕೆ ಎಷ್ಟು ಬಾರಿ ಬಂದಿದ್ದೀರಿ ಎಂದರೆ ಮೊನ್ನೆ ಒಂದು ದಿನ ಇವತ್ತು ಒಂದು ದಿನ ಒಟ್ಟು ಎರಡು ಬಾರಿ ಬಂದಿದ್ದೇನೆ. ನನಗೆ ನ್ಯಾಯಾಲಯದಿಂದ ಇಲ್ಲಿ ಬಂದು ಸಾಕ್ಷಿ ಹೇಳಲು ಸಮನ್ಸ್ ಬಂದಿರಲಿಲ್ಲ. ನಿಮ್ಮನ್ನು ನ್ಯಾಯಾಲಯಕ್ಕೆ ಬಂದು ಈ ರೀತಿ ಸಾಕ್ಷಿ ಹೇಳಬೇಕೆಂದು ಯಾರು ಹೇಳಿದ್ದರು ಎಂದರೆ ಪ್ರತಿವಾದಿ *1 (*ಶಕುಂತಲಮ್ಮ*)* ರವರು ಬಂದು ಕರೆದಿದ್ದರು ಹಾಗಾಗಿ ಬಂದು ನಾನು ಸಾಕ್ಷಿ ಹೇಳುತ್ತಿದ್ದೇನೆ. ನೀವು ಯಾವ ದಾವೆಯ ವಿಚಾರವಾಗಿ ಸಾಕ್ಷಿ ಹೇಳಲು ಬಂದಿದ್ದೀರಿ ಎಂದು ತಿಳಿದುಕೊಂಡು

ಬಂದಿದ್ದೀರಾ ಎಂದರೆ ನನಗೆ ಗೊತ್ತಿರಲಿಲ್ಲ ಇಲ್ಲಿಗೆ ಬಂದು ತಿಳಿದುಕೊಂಡಿದ್ದೇನೆ. ಪ್ರತಿವಾದಿ *1* ರವರು ನಮ್ಮ ತಂದೆಯವರನ್ನು ಭೇಟಿಯಾಗಲು ಬರುತ್ತಿದ್ದರು. ಎಷ್ಟು ದಿನಕೊಮ್ಮೆ ಭೇಟಿಯಾಗಲು ಬರುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಕೊನೆಯದಾಗಿ ಯಾವ ದಿನ ಪ್ರತಿವಾದಿ *1* ರವರು ನಿಮ್ಮ ತಂದೆಯವರನ್ನು ಭೇಟಿಯಾಗಲು ಬಂದಿದ್ದರು ಎಂದು ಹೇಳಲಾಗುವುದೆ ಎಂದರೆ ನನಗೆ ಗೊತ್ತಿಲ್ಲ. ಮೊಟ್ಟಮೊದಲ ಬಾರಿಗೆ ನಿಮ್ಮ ತಂದೆಯವರ ಸಹಿ ಎಂದು ನೀವು ಗುರುತಿಸಿರುವ ದಾಖಲೆಯನ್ನು ಯಾವಾಗ ನೋಡಿದ್ದೀರಿ ಎಂದರೆ ನಾನು ನ್ಯಾಯಾಲಯದಲ್ಲಿ ನೋಡಿದ್ದೆ. ಪ್ರತಿವಾದಿ *1* ರವರು ಆ ವಿಚಾರವನ್ನು ನಿಮ್ಮನ್ನು ಕರೆದುಕೊಂಡು ಬರುವಾಗ ಹೇಳಿರಲ್ಲಿಲ್ಲವೆ ಎಂದರೆ ಬಂದು ಸಾಕ್ಷಿ ಹೇಳಬೇಕು ಎಂದು ಹೇಳಿದ್ದರು. ನಿಡಿ-*34 (ಎ)* ಎಂದು ಗುರುತಿಸಲಾಗಿರುವ ಸಹಿ ಯಾವ ಭಾಷೆಯಲ್ಲಿದೆ ಎಂದರೆ ತಮಿಳ ಭಾಷೆಯಲ್ಲಿದೆ. ಏನು ಬರೆದಿದೆ ಎಂದು ಸಾಕ್ಷಿ ಸಹಿಯನ್ನು ತೋರಿಸಿ ಕೇಳಲಾಗಿ ಸಗದೇವನ್ ಎಂದು ಬರೆದಿದೆ ಎಂದು ಹೇಳುತ್ತಾರೆ. ನಿಡಿ-*34 (ಎ)* ಸಹಿಯ ಪಕ್ಕದಲ್ಲೆ ಇಂಗ್ಲಿಷನಲ್ಲಿ ಸಗದೇವನ್ ಎಂದು ಬರೆದಿದೆ ಎಂದರೆ ಸರಿ.

ನೀವು ನ್ಯಾಯಾಲಯಕ್ಕೆ ವಾಸಮಾಡುತ್ತಿರುವ ಬಗ್ಗೆ ಹೇಳಿದ ವಿಳಾಸ ಮತ್ತು ನಿಡಿ-*34 (ಎ)* ನಲ್ಲಿ ಬರೆದಿರುವ ವಿಳಾಸ ಬೇರೆ ಬೇರೆ ಇದೆ ಎಂದರೆ ನಾವು ಮೊದಲು ಬೇರೆ ಮನೆಯಲ್ಲಿ ಇದ್ದೇವು ನಂತರ *4* ರಿಂದ *5* ಮನೆ ಬದಲಾಯಿಸಿದ್ದೇವು ಹಾಗಾಗಿ ಅಲ್ಲಿ ವಿಳಾಸ ನಮೂದಾಗಿಲ್ಲ. ನಿಮ್ಮ

ತಂದೆಯವರು ಸಹಿ ಮಾಡಿರುವ ಇನ್ನೂ ಹಲವಾರು ದಾಖಲೆಗಳು ನಿಮ್ಮ ಮನೆಯಲ್ಲಿ ಇವೆ ಎಂದರೆ ಇಲ್ಲ. ಹಾಗೆ ಆಸ್ತಿ-ಪಾಸ್ತಿ ಕೊಂಡಿರುವುದು, ಮಾರಿರುವುದು ಇತರೆ ಕಾಗದ ಪತ್ರಗಳು ಯಾವುದು ಇಲ್ಲವೆ ಎಂದರೆ ಸಾಕ್ಷಿ ನಮ್ಮ ಹೆಸರುಗಳಿಗೆ ಮಾಡಿರುವ ದಾಖಲೆಗಳು ಇವೆ ಎಂದು ಒಂದು ದಾಖಲೆ ತೆಗೆದು ನ್ಯಾಯಾಲಯದ ಮುಂದೆ ತೋರಿಸಿರುತ್ತಾರೆ. ಯಾರು ದಾಖಲೆಯನ್ನು ತರಲು ನಿಮಗೆ ಸೂಚಿಸಿದ್ದರು ಎಂದರೆ ಯಾರು ಹೇಳಿರಿಲಿಲ್ಲ ಸಹಿಯನ್ನು ಗುರುತಿಸಲುಬರುವಾಗ ನಿಮ್ಮ ಬಳಿ ಏನಾದರೂ ಇದೆ ಎಂದು ಕೇಳಬಹುದು ಎಂದು ತಂದಿದ್ದೆ. ಈ ಕೇಸನ್ನು ಬಿಟ್ಟು ಬೇರೆ ಯಾವುದಾದರೂ ಕೇಸಗೆ ನ್ಯಾಯಾಲಯದಲ್ಲಿ ಸಾಕ್ಷಿ ಕೊಟ್ಟಿದ್ದೀರಾ ಎಂದರೆ ಇಲ್ಲ. ಆ ಬಗ್ಗೆ ಕಾನೂನು ಏನಾದರೂ ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ. ಯಾರು ಕೇಳಬಹುದು ಎಂದು ನೀವು ಊಹಿಸಿಕೊಂಡು ತಂದಿದ್ದೀರಿ ಎಂದರೆ ನಾನೆ ನನ್ನ ಸ್ವಂತ ಇಚ್ಚೆಯಿಂದ ತಂದಿದ್ದೆ. ನಿಮ್ಮ ಬ್ಯಾಗ್ ನಲ್ಲಿರುವ ದಾಖಲೆಗಳನ್ನು ಬಿಟ್ಟು ನಿಮ್ಮ ತಂದೆಯವರು ಸಹಿ ಮಾಡಿರುವುದನ್ನು ಬಿಟ್ಟು ಬೇರೆ ಯಾವುದಾದರೂ ದಾಖಲೆಯನ್ನು ನೋಡಿದ್ದೀರಾ ಎಂದರೆ ಇಲ್ಲ. ಪ್ರತಿವಾದಿ *1* ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನ್ಯಾಯಾಲಯದ ಮುಂದೆ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಡಿ-*34* ರಲ್ಲಿ ಬೇರೆ ಯಾರು ಸಹಿ ಮಾಡಿದ್ದರು ಎಂದು ಹೇಳಲು ಬರುವುದೆ ಎಂದರೆ ನನಗೆ ಗೊತ್ತಿಲ್ಲ.

**O.S No.4832/2007**
**DW-2**

**<u>ಮರು ವಿಚಾರಣೆಃ</u>** ಇಲ್ಲ.

*(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ** ಗಣಕ ಯಂತ್ರದಲ್ಲಿ **ಬೆರಳಚ್ಚು ಮಾಡಿಸಲಾಯಿತು.**)*

**ಓ.ಹೇ.ಕೇ. ಸರಿ ಇದೆ.**

***(ನಿಶಾ ರಾಣಿ ಎ. ಸಿ)***
**III ನೇ ಎ.ಸಿ.ಸಿ & ಎಸ್.ಜೆ,**
**ಬೆಂಗಳೂರು.**